ಕರ್ನಾಟಕ ವಿಧಾನಸಭೆ

ಗುರುವಾರ 24ನೇ ಜನವರಿ 2002 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು: ಮಾನ್ಯ ವಿಜಯಕುಮಾರ ಶೆಟ್ಟಿಯವರೇ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಸ್ವಲ್ಪ ಸಮಯವನ್ನು ಕೇಳಿದ್ದಾರೆ.

ಶ್ರೀ ವಿಜಯಕುಮಾರ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಇದು ಅತ್ಯಂತ ಪ್ರಮುಖವಾದಂತಹ ಪ್ರಶ್ನೆಯಾಗಿದೆ, ಇದು ಇವತ್ತಿನ, ನಿನ್ನೆಯ ಪ್ರಶ್ನೆಯಲ್ಲ, ಬಹಳ ಸಮಯದಿಂದ ನೆನೆಗುದಿಗೆ ಬಿದ್ದಿರುವಂಥಾದ್ದು.

ಅಧ್ಯಕ್ಷರು: ತಾವು ಪ್ರಾಮುಖ್ಯವಾದಂಥಾದ್ದನ್ನೇ ಕಳುಹಿಸಿರುವಂಥಾದ್ದು, ಅದರಂತೆ ಇದು ಲಾಟ್‌ನಲ್ಲಿ ಬಂದಿರುವುದು. ತಾವು ಸ್ವಲ್ಪ ಸಮಯವನ್ನು ಕೊಡಿ, ಇದನ್ನು ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ.

ರೇಷ್ಮೆ ನಿಯಂತ್ರಣ ಕಾಯ್ದೆಯನ್ನು ಪರಿಷ್ಕರಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 33(244)

ಸದಸ್ಯರ ಹೆಸರು: ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ):

ಸಚಿವರ ಹೆಸರು ಮತ್ತು ಪದನಾಮ: ಶ್ರೀ ಎಂ.ಮಹಾದೇವ್ (ರೇಷ್ಮೆ ಹಾಗೂ ಸಚಿವರು)

ಪ್ರಶ್ನೆಗಳು

ಅ. ''ರೇಷ್ಮೆ ನಿಯಂತ್ರಣ'' ಕಾಯ್ದೆಯನ್ನು ಪರಿಷ್ಕರಣ ಮಾಡಲಾಗುತ್ತಿದೆಯೇ?

ಆ. ಹಾಗಿದ್ದಲ್ಲಿ ಅದರ ವಿವರಗಳೇನು?

ಉತ್ತರಗಳು

ಅ. ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಆ. ನೀತಿಯಂತೆ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಹಿನ್ನಲೆಯಲ್ಲಿ ರಾಜ್ಯದ ಸಮಗ್ರ ರೇಷ್ಮೆ ಅಭಿವೃದ್ಧಿಗಾಗಿ ಕಾಯ್ದೆಗೆ ಕೆಲವು ತಿದ್ದುಪಡಿ ತರಲು ಉದ್ದೇಶಿಸಿದ್ದು, ಇದರಲ್ಲಿ ತೊಡಗಿರುವ ಎಲ್ಲಾ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮುಂದುವರೆದಿದೆ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಸರ್ಕಾರ ''ರೇಷ್ಮೆ ನಿಯಂತ್ರಣ'' ಕಾಯ್ದೆಗೆ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ ಎಂದು ಮಾನ್ಯ ರೇಷ್ಮೆ ಸಚಿವರು ತಿಳಿಸಿದ್ದಾರೆ. ಈ ಉದ್ದೇಶಿತ ತಿದ್ದುಪಡಿಗಳಲ್ಲಿ ಪ್ರಮುಖವಾದಂತಹ ಅಂಶಗಳು ಯಾವುವು ಹಾಗೂ ಈ ತಿದ್ದುಪಡಿಗೆ ಏನು ಅನಿವಾರ್ಯತೆ ಇತ್ತು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಈಗಾಗಲೇ ರೈತರ ಹಿತಕ್ಕೆ ಇದರಿಂದ ಧಕ್ಕೆಯುಂಟಾಗಿದೆ ಎಂಬ ಜಿಜ್ಞಾಸೆ ಮೂಡಿದ್ದು ಈ ಒಂದು ತಿದ್ದುಪಡಿಯಲ್ಲಿ ರೈತರ ಹಿತವನ್ನು ಕಾಪಾಡುವಂತಹ ವಿಚಾರದಲ್ಲಿ ಸರ್ಕಾರ ಯಾವ್ಯಾವ ಅಂಶಗಳಿಗೆ ಮಹತ್ವವನ್ನು ನೀಡಿದೆ ಎಂಬ ಅಂಶವನ್ನು ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಯವರೇ, ಈ ತಿದ್ದುಪಡಿಗಳು 5-6 ಪೇಜ್‌ಗಳಷ್ಟು ಇರುತ್ತವೆ, ಅದನ್ನು ಸಂಕ್ಷಿಪ್ತವಾಗಿ ಒಂದು ನಿಮಿಷದಲ್ಲಿ ಹೇಳಿ, ಏಕೆಂದರೆ ತಾವು ಉತ್ತರವನ್ನು ಕೊಡುವಾಗ ದೀರ್ಘವಾಗಿ ಕೊಟ್ಟರೆ ಸಮಯದ ಅಭಾವದಿಂದ ತೊಂದರೆಯಾಗುತ್ತದೆ, ಮತ್ತೆ ಮಾನ್ಯ ಸದಸ್ಯರುಗಳು ದೀರ್ಘವಾಗಿ ಪ್ರಶ್ನೆಗಳನ್ನು ಕೇಳಿದರೆ ತೊಂದರೆಯಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಯವರು ಸಂಕ್ಷಿಪ್ತವಾಗಿ ಉತ್ತರವನ್ನು ಹೇಳಿ.

ಶ್ರೀ ಎಂ.ಮಹಾದೇವ್: ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ''ರೇಷ್ಮೆ ನಿಯಂತ್ರಣ'' ಕಾಯಿದೆಗೆ ತಿದ್ದುಪಡಿಯನ್ನು ತರಬೇಕೆಂದು ಉದ್ದೇಶಿಸಿದೆ, ಇದಕ್ಕೆ ಕಾರಣ ''ಸತ್ಯಂ ಕಮಿಟಿ''ಯು ಈ ತಿದ್ದುಪಡಿಯನ್ನು ತರಬೇಕೆಂದು 1994ರಲ್ಲಿ ವರದಿಯನ್ನು ಕೊಟ್ಟಿದೆ, ಮತ್ತೆ ಕೇಂದ್ರ ಜವಳಿ ಮಂತ್ರಾಲಯ ಹಾಗೂ ಕಾರ್ಯದರ್ಶಿಗಳ ಸಮ್ಮೇಳನ ದಿ:10.4.2001ರಲ್ಲಿ ತಿದ್ದುಪಡಿಗಳನ್ನು ತರಬೇಕೆಂದು ತಿಳಿಸಿದೆ. ಈ ರಾಜ್ಯದಲ್ಲಿ ಕ್ರೂರವಾದಂತಹ ಕಾಯಿದೆ ಇದೆಯೆಂದು ವರದಿಯನ್ನು ಕೊಟ್ಟಿದೆ. ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯವೂ ಸಹ ದಿ:27.11.2001ರಲ್ಲಿ ಇದನ್ನು ತಿದ್ದುಪಡಿ ಮಾಡಬೇಕೆಂದು ಕೊಟ್ಟಿದೆ, ಮತ್ತೆ ಇದೇ ರೀತಿಯಲ್ಲಿ ''ಕೇಂದ್ರ ರೇಷ್ಮೆ ಮಂಡಳಿ''ಯೂ ಸಹ ಕಾಯಿದೆಯನ್ನು ತಿದ್ದುಪಡಿ ಮಾಡಬೇಕೆಂಬ ಅಭಿಪ್ರಾಯಪಟ್ಟಿದೆ, ಮತ್ತೆ ರೇಷ್ಮೆ ಉದ್ದಿಮೆಗೆ

ಸಂಬಂಧಪಟ್ಟಂತಹ ರೀಲರ್ಸ್, ವೀವರ್ಸ್, ಎಲ್ಲರೂ ಸೇರಿ ಈ ತಿದ್ದುಪಡಿಯನ್ನು ತರಲೇಬೇಕೆಂದು, ಇದರಿಂದ ನಮಗೆ ಬಹಳ ತೊಂದರೆಯಾಗುತ್ತಿದೆಯೆಂಬ ಮನವಿಯನ್ನು ನನಗೆ ಮತ್ತೆ ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿದ್ದಾರೆ. ಅಲ್ಲಿ ಇರತಕ್ಕಂಥ ಸಮಸ್ಯೆಯನ್ನು ವಿವರಿಸಿ ನಮಗೆ ವರದಿಯನ್ನು ಕೊಟ್ಟಿರುವಂತಹ ಹಿನ್ನೆಲೆಯಲ್ಲಿ ಇಡೀ ರಾಷ್ಟ್ರದಲ್ಲಿ ಈ ರೇಷ್ಮೆ ಕಾಯಿದೆ, ರಾಜ್ಯದಲ್ಲಿರುವಂತಹ ಈ ಕಠಿಣವಾದಂತಹ ಕಾಯಿದೆ ಎಲ್ಲೂ ಇಲ್ಲ, ಇದನ್ನು ಬದಲಾವಣೆ ಮಾಡಲೇಬೇಕೆಂಬ ವರದಿಯನ್ನು ಕೊಟ್ಟಿರುವುದರಿಂದ ನಾವು ನೇಕಾರರ ಹಿತದೃಷ್ಟಿಯಿಂದ ಇದನ್ನು ತಿದ್ದುಪಡಿ ಮಾಡಬೇಕೆಂದು ತಂದಿದ್ದೇವೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಜವಳಿ ಇಲಾಖೆಯವರು ರಾಷ್ಟ್ರೀಯ ಜವಳಿ ನೀತಿಯ ಬಗ್ಗೆ ರಚಿಸಿದ್ದ ತಜ್ಞರ ಸಮಿತಿಯು ಆಗಸ್ಟ್ 1999ರಲ್ಲಿ ಕೊಟ್ಟಿರುವಂತಹ ವರದಿಯ ಖಂಡಿಕೆ 10.8.11ರಲ್ಲಿ ಸಮಿತಿ ನೇಕಾರರಿಗೆ ಹೆಚ್ಚಿನ ದಂಡ ಹಾಗೂ ಕಾರಾಗೃಹ ಶಿಕ್ಷೆ ವಿಧಿಸಲು ಆಸ್ಪದ ಕೊಡುವಂತಹ ಕಠಿಣ ಕಾನೂನಿನಿಂದಾಗಿ ಕರ್ನಾಟಕ ನೇಕಾರರು ಅನುಭವಿಸುವ ತೊಂದರೆ ನಮ್ಮ ಗಮನಕ್ಕೆ ಬಂದಿರುವುದಾಗಿ ತಿಳಿಸಿತು. ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ ಇನ್ನು ಯಾವುದೇ ರಾಜ್ಯದಲ್ಲಿ ಇಂತಹ ಕಠಿಣ ಕಾನೂನು ಜಾರಿಯಲ್ಲಿ ಇಲ್ಲವೆಂಬ ಅಂಶವನ್ನೂ ಸಹ ಸಮಿತಿಯು ಒತ್ತಿ ಹೇಳಿದೆ, ಅಲ್ಲದೇ ಸಮಿತಿಯು ತನ್ನ ವರದಿಯಲ್ಲಿ ''ರೇಷ್ಮೆ ವಿನಿಮಯ ಕೇಂದ್ರ''ದ ಬಗ್ಗೆ ಉಲ್ಲೇಖಿಸುತ್ತಾ ಕರ್ನಾಟಕ ರಾಜ್ಯದ ನೇಕಾರರು ಉತ್ತಮ ಮಟ್ಟದ ರೇಷ್ಮೆ ವಸ್ತುಗಳನ್ನು ತಯಾರಿಸಿದ್ದು, 1979ರಲ್ಲಿ ''ರೇಷ್ಮೆ ವಿನಿಮಯ ಕೇಂದ್ರ'' ಸ್ಥಾಪನೆಯಾದ ನಂತರ ರಾಜ್ಯದಲ್ಲಿ ತಯಾರಿಸಿದ ರೇಷ್ಮೆನೂಲಿನ ಗುಣಮಟ್ಟ ಕಡಿಮೆಯಾಗುತ್ತಿರುವುದರಿಂದ ನೇಕಾರರು ಶಿಫಾನ್, ಜಾರ್ಜೆಟ್, ಮುಂತಾದ ಉತ್ತಮ ಗುಣಮಟ್ಟದ ರೇಷ್ಮೆ ಬಟ್ಟೆಗಳನ್ನು ತಯಾರಿಸಲು ರೇಷ್ಮೆ ನೂಲನ್ನು ಆಮದು ಮಾಡಿಕೊಂಡು, ಇದನ್ನು ಅವಲಂಬಿಸಿಕೊಂಡು ಪ್ರಬುದ್ಧ ಪರಿಸ್ಥಿತಿ ಉಂಟಾಗಿದ್ದು, ಹಾಲಿ ರೀಲರ್‌ಗಳಿಗೂ ಉಳಿದ ಕ್ಷೇತ್ರಗಳಿಗೂ ಇರುವಂತಹ ರಹದಾರಿ ನವೀಕರಣದ ಅವಧಿಯನ್ನು ಹೆಚ್ಚಿಸುವುದು, ಇದನ್ನು ನಿಯಮ 4ರಲ್ಲಿ ರೇಷ್ಮೆಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳ ಸಮಿತಿಯ ಅಧಿಕಾರೇತರ ಸಂಖ್ಯೆಯನ್ನು ಹೆಚ್ಚಿಸಿ ಬಲಪಡಿಸುವುದು, ಕಲಂ 10 ಹಾಗೂ 10(ಎ), ರೇಷ್ಮೆ ಮೊಟ್ಟೆ ಉತ್ಪಾದಕರು ಕಳುಹಿಸುವ ಗೂಡಿನ ಮೌಲ್ಯದ ಶೇ.1ರಷ್ಟು ಮಾರುಕಟ್ಟೆ ಶುಲ್ಕವನ್ನು ಅವರಿಂದ ವಸೂಲು ಮಾಡುವುದು. ಕಲಂ 18, ನಿಯಮ 16ರಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ವಹಿವಾಟು, ರೇಷ್ಮೆ ವಿನಿಮಯಗಳಿಗೆ ಸಂಬಂಧಿಸಿದಂತೆ ರೇಷ್ಮೆ ನೂಲನ್ನು ರೇಷ್ಮೆ ವಿನಿಮಯ ಕೇಂದ್ರಗಳ ಮೂಲಕ ವಹಿವಾಟು ಮಾಡಬೇಕೆಂಬ ನಿಬಂಧನೆಯನ್ನು ಸಡಿಲಿಸಿ ವಿನಿಮಯ ಕೇಂದ್ರಗಳ ಮೂಲಕ ವಹಿವಾಟು ಮಾಡುವುದನ್ನು ಐಚ್ಛಿಕಗೊಳಿಸುವುದು, ಹಾಗೂ ನೂಲಿನ ವಹಿವಾಟಿನ ಮೇಲೆ ವಿಧಿಸಲಾಗುತ್ತಿರುವ ಮಾರುಕಟ್ಟೆಯ ಶುಲ್ಕವನ್ನು ತೆಗೆದುಹಾಕುವುದು. ಕಲಂ 5(ಎ) ಮತ್ತು 8(ಎ)ನಲ್ಲಿ ರೇಷ್ಮೆ ಕಾನೂನು ಜಾರಿ ವಿಭಾಗದಿಂದ ಉಂಟಾಗುತ್ತಿದ್ದೆನ್ನಲಾದ ತೊಂದರೆಗಳನ್ನು

ನಿವಾರಿಸುವುದು, ಬೆಲೆ ಸ್ಥಿರೀಕರಣ ನಿಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ತಿದ್ದುಪಡಿಯನ್ನು ತರತಕ್ಕಂಥಾದ್ದು. ಈ ಬೆಲೆ ಸ್ಥಿರೀಕರಣ ನಿಧಿ ಎಂದು ಏನು ಇದೆ, ಅದನ್ನು ನಾವೇ ಇಟ್ಟುಕೊಳ್ಳಬೇಕೆನ್ನುವಂಥಾದ್ದು, ಮತ್ತೆ ಕಾರಾಗೃಹ ಶಿಕ್ಷೆ ವಿಧಿಸುವುದಕ್ಕೆ ಇರತಕ್ಕಂಥ ಕಾನೂನು ಕಲಂಗಳನ್ನು ತೆಗೆದುಹಾಕುವುದು. ಇಲ್ಲಿ ಬಹಳ ಕಠಿಣವಾಗಿರತಕ್ಕಂಥ ಕಾನೂನುಗಳನ್ನು ಬದಲಾವಣೆಯನ್ನು ಮಾಡಬೇಕೆಂಬ ಉದ್ದೇಶದಿಂದ ನಾವು ಈ ಕಾಯಿದೆಯನ್ನು ತಿದ್ದುಪಡಿ ಮಾಡುವಂಥಾದ್ದಕ್ಕೆ ವಿಚಾರ ಮಾಡಿದ್ದೇವೆ.

ಶ್ರೀ ಎಂ.ಎಸ್.ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಈ ''ರೇಷ್ಮೆ ನಿಯಂತ್ರಣ'' ಕಾಯಿದೆಗೆ ತಿದ್ದುಪಡಿ ತರುತ್ತಾರೆಂಬ ವಿಚಾರ ತಿಳಿದ ತಕ್ಷಣ ಈ ರೇಷ್ಮೆ ಬೆಲೆಯೂ ಕುಸಿದು ರೈತರಿಗೆ ಬಹಳ ತೊಂದರೆಯಾಗುತ್ತಿದೆ ಎಂಬ ವಿಚಾರವನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ನಾನು ತಮ್ಮ ಮೂಲಕ ಸರ್ಕಾರದಲ್ಲಿ ನಿವೇದನೆ ಮಾಡಿಕೊಳ್ಳುವಂಥಾದ್ದು ಏನೆಂದರೆ ರೇಷ್ಮೆ ಕೃಷಿಯಲ್ಲಿ ಯಾವುದೇ ವರ್ಗದವರಿಗೆ ತೊಂದರೆಯಾದರೂ ಅದನ್ನು ನಿವಾರಿಸುವಂಥಾದ್ದು ಸರ್ಕಾರದ ಆದ್ಯ ಕರ್ತವ್ಯವಾಗುತ್ತದೆ. ಆ ರೀತಿಯಲ್ಲಿ ಮೂಲತಃ ರೇಷ್ಮೆ ಉತ್ಪಾದನೆ ಮಾಡತಕ್ಕಂಥ ರಾಜ್ಯ ರೈತರ ಹಿತದೃಷ್ಟಿಯನ್ನು ಕಾಪಾಡಲು ಈ ಕಠಿಣವಾದಂಥ ಕಾಯಿದೆಯೆ ತಿದ್ದುಪಡಿ ಮಾಡಲು ತಾವು ಕಾರ್ಯೋನ್ಮುಖರಾಗಿದ್ದೀರಿ. ನಮ್ಮ ದೇಶದಲ್ಲಿ ರೇಷ್ಮೆ ಕೃಷಿಯಲ್ಲಿ ಪ್ರಧಾನವಾಗಿರುವಂತಹ ರಾಜ್ಯ ಕರ್ನಾಟಕ ರಾಜ್ಯವಾಗಿದೆ. ಆದುದರಿಂದ ನಮ್ಮ ರೈತರಿಗೆ ಧಕ್ಕೆ ಬಾರದಂತೆ, ತೊಂದರೆಯಾಗದಂತೆ, ಮತ್ತೆ ವ್ಯಾಪಾರಸ್ಥರ ಮುಷ್ಟಿಯಲ್ಲಿ ಸಿಕ್ಕಿ ಹಾಕಿಕೊಳ್ಳದಂತೆ ರೈತರಿಗೆ ರಕ್ಷಣೆಗೆ ಬರುವಂತಹ ಅಂಶಗಳನ್ನು ಕೂಡ ಇದರಲ್ಲಿ ತರಬೇಕು, ಒಟ್ಟಾರೆ ವೀವರ್‌ಗಳಿಂದ ರೀಲರ್‌ಗಳವರೆಗೂ ನಿಯಂತ್ರಣ ಕಾಯಿದೆಯಿಂದ ಇದುವರೆಗೆ ಚೆನ್ನಾಗಿ ನಡೆದುಕೊಂಡು ಬಂದಿತ್ತು. ತಾವು ಈಗ ರೈತರ ಹಿತಕ್ಕೆ ಧಕ್ಕೆ ಬಾರದಂತೆ ಕಾರ್ಯವನ್ನು ತೆಗೆದುಕೊಳ್ಳಬೇಕು.

ಶ್ರೀ ಬಿ.ರಾಜುಗೌಡ(ಹನೂರು): ಮಾನ್ಯ ಅಧ್ಯಕ್ಷರೇ, ಈಗ ರೇಷ್ಮೆ ಕಾಯಿದೆಗೆ ಪರಿಷ್ಕರಣೆಯನ್ನು ತರುವಂಥಾದ್ದು ಏಕೆ? ಇದರ ಹಿನ್ನಲೆ ಏನು ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಯವರು ಚೆನ್ನಾಗಿ ಯೋಚನೆ ಮಾಡಬೇಕೆಂದು ನನಗೆ ಅನ್ನಿಸುತ್ತಿದೆ. ಬಹುಶಃ ಮಧ್ಯವರ್ತಿಗಳಿಂದ ತಪ್ಪಿಸಬೇಕೆಂಬ ಉದ್ದೇಶದಿಂದ ಈ ಕಾಯಿದೆಯನ್ನು ತಂದಿರತಕ್ಕಂಥಾದ್ದು. ಅದನ್ನು ತೆಗೆದು ಹಾಕಿದರೆ ಮತ್ತೆ ಮಧ್ಯವರ್ತಿಗಳ ಕೈವಾಡ ಜಾಸ್ತಿಯಾಗುತ್ತದೆ. ಎಲ್ಲಿ ರೇಷ್ಮೆ ಗೂಡು ಉತ್ಪಾದನೆಯಾದರೂ ಅದು ಮಾರುಕಟ್ಟೆಗೆ ಬರಬೇಕೆಂದು ನಿಯಮ ಮಾಡಿದ್ದೇವೆ. ಇದನ್ನು ಈಗ ತೆಗೆದು ಹಾಕಬೇಕೆಂದರೆ ಇದನ್ನು ನೀವು ಪರಿಷ್ಕರಣ ಮಾಡಿ ತಿದ್ದುಪಡಿ ತಂದರೆ ರೇಷ್ಮೆ ವ್ಯವಹಾರಕ್ಕೆ, ರೇಷ್ಮೆ ವಹಿವಾಟಿಗೆ ಹಾಗೂ ರೇಷ್ಮೆ ಉದ್ಯಮಕ್ಕೆ ವಹಿವಾಟಿಗೆ ಮಾರಕವಾಗುತ್ತದೆ. ದಯಮಾಡಿ ತಾವು ಈ ಕಾಯಿದೆಯನ್ನು ತರುವುದಕ್ಕೆ ಮೊದಲು ಸಂಬಂಧಪಟ್ಟಂತಹ ಜಿಲ್ಲಾ ಶಾಸಕರೆಲ್ಲರನ್ನೂ ಸೇರಿಸಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡು ಆನಂತರ ತಾವು ಈ ಕಾಯ್ದೆಯನ್ನು ತರುವಂಥಾದ್ದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ.ಮಹಾದೇವ್: ಮಾನ್ಯ ಅಧ್ಯಕ್ಷರೇ, ಈಗ ರಾಜ್ಯದ ರೇಷ್ಮೆ ಬೆಳೆಗಾರ ರೈತರ ಹಿತವನ್ನು ಖಂಡಿತವಾಗಿಯೂ ಸರ್ಕಾರ ಕಾಪಾಡುತ್ತದೆ. ಅವರನ್ನು ಬಿಟ್ಟುಕೊಡುವಂತಹ ಪ್ರಶ್ನೆಯೇ ಇಲ್ಲವೆಂದು ಹೇಳುತ್ತೇನೆ. ಅವರ ಹಿತಕ್ಕೆ ಧಕ್ಕೆ ತರುವಂತಹ ಕಾಯಿದೆಯನ್ನು ನಾವು ಮಾಡುತ್ತಿಲ್ಲ. ಈಗ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುವಂತಹ ರೇಷ್ಮೆಯನ್ನು ಕಡ್ಡಾಯ ಮಾಡಲೇಬೇಕು. ಈಗ 8,200 ಮೆಟ್ರಿಕ್ ಟನ್ ರೇಷ್ಮೆ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. ಅದರಲ್ಲಿ ಶೇ.25ರಷ್ಟು ಮಾತ್ರ ನಮ್ಮ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುತ್ತಿದೆ. ಇಲ್ಲಿ ಗ್ಲೋಬಲೈಜೇಷನ್, ಲಿಬರಲೈಜೇಷನ್, ಡಬ್ಲ್ಯೂಟಿಓ, ಇವೆಲ್ಲವೂ ಬರುವ ಹಿನ್ನೆಲೆಯಲ್ಲಿ ನಾವು ಈ ರೀತಿಯಾಗಿ ರಿಸ್ಟ್ರಿಕ್ಷನ್ ಮಾಡಿದರೆ ಅಲ್ಲಿ ಒಳ್ಳೆಯ ಗುಣಮಟ್ಟದ ರೇಷ್ಮೆ ಬರುವುದಿಲ್ಲ, ಮತ್ತೆ ಇದರಿಂದ ಬಹಳ ತೊಂದರೆಗಳು ಆಗುತ್ತಿವೆ. ನಾವು ಫ್ರೀ-ಮಾರ್ಕೆಟ್ ಮಾಡಿದೆವೆಂದರೆ ನಮ್ಮಲ್ಲಿ ಯಾವುದೇ ತೊಂದರೆಯಾಗುವುದಿಲ್ಲ. ನಾವು ಇದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಇನ್ನೂ ಕಾಯಿದೆ ಚರ್ಚೆಯ ಹಂತದಲ್ಲಿದೆ. ಇದನ್ನು ನಾವು ಸಂಪೂರ್ಣವಾಗಿ ಜಾರಿಗೆ ತರುವ ತೀರ್ಮಾನವನ್ನು ಇನ್ನೂ ತೆಗೆದುಕೊಂಡಿಲ್ಲ. ಅಡಿಷನಲ್ ಚೀಫ್ ಸೆಕ್ರೆಟರಿಯಾದಂತಹ ಶ್ರೀ ಬಿ.ಎಸ್.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಈ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಕೊಡುತ್ತಾ ಇದೆ, ಆ ಸಂದರ್ಭದಲ್ಲಿ ರೇಷ್ಮೆ ಟ್ರೇಡರ್ಸ್, ರೀಲರ್ಸ್, ವೀವರ್ಸ್, ಮತ್ತೆ ರೈತರು, ಶಾಸಕರು ಹಾಗೂ ಎಂ.ಪಿ.ಗಳು, ಇವರೆಲ್ಲರೂ ಜೊತೆಯಲ್ಲೂ ಒಮ್ಮೆ ಸಮಾಲೋಚನೆಯನ್ನು ಮಾಡಿದ್ದೇವೆ. ನಮ್ಮ ಅಧಿಕಾರಿಗಳೂ ಸಹ ಅವರ ಮಟ್ಟದಲ್ಲಿ ಈ ಟ್ರೇಡರ್ಸ್ ಮತ್ತು ವೀವರ್ಸ್ ಸಂಪರ್ಕ ಹಾಗೂ ರೈತರ ಸಂಪರ್ಕವನ್ನು ಇಟ್ಟುಕೊಂಡು ಮಾತನಾಡಿದ್ದಾರೆ, ಮತ್ತೆ ಅಂತಿಮವಾಗಿ ಒಂದು ಸಾರಿ ಎಂ.ಪಿ.ಗಳು, ಎಂ.ಎಲ್.ಎ.ಗಳು, ಮತ್ತೆ ಸಂಬಂಧಪಟ್ಟಂತಹ ವಿವಿಧ ಇಲಾಖಾ ಮುಖ್ಯಸ್ಥರುಗಳನ್ನು, ರೈತರನ್ನು ಸಮ್ಮೇಳನ ಸಭಾಂಗಣದಲ್ಲಿ ಸಭೆ ಕರೆದು ಚರ್ಚೆಯನ್ನು ಮಾಡಿದ್ದೇನೆ. ಈಗ ಇದು ಇನ್ನೂ ಚರ್ಚೆಯ ಹಂತದಲ್ಲೇ ಇದೆ, ಇದಕ್ಕೆ ನಾವು ಇನ್ನೂ ಅಂತಿಮ ರೂಪವನ್ನು ಕೊಟ್ಟಿಲ್ಲ. ಮಾನ್ಯ ರಾಜುಗೌಡರು ಸಲಹೆ ಕೊಟ್ಟಿರುವಂತೆ ಮತ್ತೊಮ್ಮೆ ಎಂಪಿ.ಗಳನ್ನು, ಎಂ.ಎಲ್.ಎ.ಗಳನ್ನು, ಟ್ರೇಡರ್ಸ್‌ಗಳನ್ನು, ವೀವರ್ಸ್‌ಗಳನ್ನು, ರೀಲರ್ಸ್‌ಗಳನ್ನು, ರೈತರನ್ನು ಕರೆದು ಕಾಯಿದೆಗೆ ಅಂತಿಮ ರೂಪವನ್ನು ಕೊಡುವಂತಹ ಸಂದರ್ಭದಲ್ಲಿ ಚರ್ಚೆ ಮಾಡುತ್ತೇನೆ.

ಬಸವನಬಾಗೇವಾಡಿ ಮತಕ್ಷೇತ್ರದ ಗ್ರಾಮಗಳಲ್ಲಿ ಪಶು ಆಸ್ಪತ್ರೆ ತೆರೆಯುವುದು.

ಚುಕ್ಕೆ ಗುರುತಿನ ಪ್ರಶ್ನೆ: 34(249)

ಸದಸ್ಯರ ಹೆಸರು : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ)